# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 6395 / 2022

ಪಿರ್ಯಾದುದಾರರು : ಕುದೂರು ಪೋಲಿಸ್ ಠಾಣೆ

**ವಿರುದ್ಧ**

**1 ನೇ ಆರೋಪಿ : ವಿಶ್ವನಾಥ ಬಿನ್ ಹನುಮಂತರಾಯಪ್ಪ**
**30 ವರ್ಷಗಳು,**
**ಉಡುಗುಂಟೆ ಗ್ರಾಮ, ಸೋಲೂರು ಹೋಬಳಿ,**
**ಮಾಗಡಿ ತಾಲ್ಲೂಕು.**

**2 ನೇ ಆರೋಪಿ : ಹನುಮಂತರಾಯಪ್ಪ ಬಿನ್ ತಿಮ್ಮರಾಯಪ್ಪ**
**60 ವರ್ಷಗಳು,**
**ಉಡುಗುಂಟೆ ಗ್ರಾಮ, ಸೋಲೂರು ಹೋಬಳಿ,**
**ಮಾಗಡಿ ತಾಲ್ಲೂಕು.**

## <u>ದೋಷರೋಪಣೆ</u>

(ಶ್ರೀಮತಿ. ಧನಲಕ್ಷ್ಮಿ. ಎಂ, ಬಿ.ಎ.ಎಲ್, ಎಲ್.ಎಲ್.ಬಿ, ಅಪರ ನ್ಯಾಯಿಕ ದಂಡಾಧಿಕಾರಿ ಮಾಗಡಿ ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರೆಸುವ ಆಪಾದನೆ.

ದಿನಾಂಕಃ 25-04-2022 ರಂದು ಬೆಳಿಗ್ಗೆ 7.30 ಗಂಟೆಯ ಸಮಯದಲ್ಲಿ ಸೋಲೂರು ಹೋಬಳಿಯ, ಉಡುಕುಂಟೆ ಗ್ರಾಮದ ಆರೋಪಿತರುಗಳಾದ ನಿಮ್ಮ ವಾಸದ ಮನೆಯ ಮುಂಭಾಗದ ರಸ್ತೆಯಲ್ಲಿ ಆರೋಪಿತರುಗಳಾದ ನೀವುಗಳು 3 ವರ್ಷಗಳಿಂದ ನಿಗಾವಣೆ ಮಾಡುತ್ತಿದ್ದ ಚಾಸಾ-2ಃಗಂಗರಂಗಯ್ಯನವರಿಗೆ ಸೇರಿದ 40 ಫಸಲಿನ ಮಾವಿನಮರಗಳು ಮತ್ತು ಹೊಲದ ಗೇಟಿಗೆ ಬೀಗ ಹಾಕುವ ವಿಚಾರವಾಗಿ 2 ನೇ ಆರೋಪಿ ಮತ್ತು ಚಾಸಾ-2 ರವರು ಮಾತನಾಡುತ್ತಿದ್ದಾಗ ಮಾತು ವಿಕೋಪಕ್ಕೆ ತಿರುಗಿ 1 ನೇ ಆರೋಪಿ ದೊಣ್ಣೆಯನ್ನು ತೆಗೆದುಕೊಂಡು ಬಂದು ಚಾಸಾ-2 ರವರ ಬಲಗಾಲಿಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ಸದರಿ

ಕೃತ್ಯವು ಭಾರತೀಯ ದಂಡ ಸಂಹಿಂತೆ ಕಲಂ-324 ಸಹವಾಚಕ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಕೊನೆಯದಾಗಿ ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ಚಾಸಾ-2 ರವರು ಕೂಗಿಕೊಂಡು ಕೆಳಕ್ಕೆ ಕೂತಾಗ 1 ನೇ ಆರೋಪಿ ಅದೇ ದೊಣ್ಣೆಯಿಂದ ಚಾಸಾ-2 ರವರ ತಲೆಯ ಹಿಂಭಾಗಕ್ಕೆ ಹೊಡೆದು ತೀವ್ರ ಸ್ವರೂಪದ ರಕ್ತಗಾಯವನ್ನುಂಟು ಮಾಡಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿಂತೆ ಕಲಂ-326 ಸಹವಾಚಕ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಪ್ರಶ್ನೆ-1 ಃ ನಿಮ್ಮಗಳ ಮೇಲಿನ ಆಪಾದನೆಯ ಸಾರವನ್ನು ಓದಿ, ವಿವರಿಸಿ ಹೇಳಿದಾಗ ನಿಮಗೆ ಅರ್ಥವಾಯಿತೆ?

**ಆರೋಪಿ-1 ಮತ್ತು 2 ರವರ ಉತ್ತರ ಃ**

ಪ್ರಶ್ನೆ-2 ಃ ನೀವುಗಳು ನಿಮ್ಮ ತಪ್ಪನ್ನು ಒಪ್ಪುಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಇಚ್ಚಿಸುವಿರೋ ?

**ಆರೋಪಿ-1 ಮತ್ತು 2 ರವರ ಉತ್ತರ ಃ**

ಈ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಹೇಳಿ, ವಿವರಿಸಿ, ಅವನ ಸಹಿಯನ್ನು ಪಡೆಯಲಾಗಿದೆ ಎಂದು ದೃಢೀಕರಿಸಿದ್ದೇನೆ.

( ಶ್ರೀಮತಿ ಧನಲಕ್ಷ್ಮಿ ಎಂ.)
ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು
ಜೆಎಂಎಫ್‌ಸಿ ನ್ಯಾಯಾಲಯ, ಮಾಗಡಿ.